# ಶ್ರೀಮಾತೆ ಶಾರದಾದೇವಿ ಮತ್ತು ಕೌಟುಂಬಿಕ ಸಮಸ್ಯೆಗಳು

ಡಾ. ಕೆ. ಎಲ್. ಪ್ರಸನ್ನಾಕ್ಷಿ

*ಸ್ವಸ್ಥ ಕುಟುಂಬ ಸ್ವಸ್ಥ ಸಮಾಜಕ್ಕೆ ತಳಹದಿ. ಆದರೆ ಕುಟುಂಬದ ಆರೋಗ್ಯವನ್ನು ಕೆಡಿಸುವ ಹಲವಾರು ಅಂಶಗಳಿರುತ್ತವೆ. ಶ್ರೀಮಾತೆಯವರು ಕೌಟುಂಬಿಕ ಮೌಲ್ಯಗಳ ಮಹತ್ವವನ್ನು ತೋರಿಸುವುದಕ್ಕಾಗಿಯೇ ಅತ್ಯಂತ ಕಷ್ಟಕರ ಕುಟುಂಬವ್ಯವಸ್ಥೆಯಲ್ಲಿ ತಮ್ಮನ್ನು ಇರಿಸಿಕೊಂಡರು. ಅವರು ಹೇಗೆ ಈ ಕಷ್ಟಕರ ಸನ್ನಿವೇಶವನ್ನು ಎದುರಿಸಿದರೆಂಬುದನ್ನು ಈ ಲೇಖನ ವಿವರಿಸುತ್ತದೆ. ಶ್ರೀಮತಿ ಪ್ರಸನ್ನಾಕ್ಷಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.*

**ಈ** ಪ್ರಪಂಚ ಭಗವಂತನ ಲೀಲಾವಿನೋದ ಕ್ಷೇತ್ರ. ಈ ಲೋಕದಲ್ಲಿ ಸೃಷ್ಟವಾದ ಜೀವಿಗಳಿಗೆ ಆಚಾರವೇ ಪ್ರಧಾನವಾದುದು. ಸೃಷ್ಟಿಯ ಮೂಲದೆಡೆಗೆ (ಆ) ಚಲಿಸುವುದು, ನಡೆಯುವುದೇ (ಚಾರ) ಆಚಾರ. ಚಲಿಸುತ್ತಿರುವ ಪ್ರಪಂಚದ ವೇಗದ ಪ್ರಭಾವದಿಂದ ಈ ಆಚಾರದ ಗತಿಯಲ್ಲಿ ವ್ಯತ್ಯಾಸವಾಗುವ ಸಾಧ್ಯತೆಗಳು ಅನೇಕ. ಹಾಗೆ ಜೀವಿಯ ಗತಿಯು ಸಂಪೂರ್ಣ ವ್ಯತ್ಯಸ್ತವಾಗಿ ತನ್ನ ಮೂಲವಾದ ಪರತತ್ತ್ವದೆಡೆಗೆ ಸಾಗುವುದು ಬಿಟ್ಟು, ಅದರ ಗತಿ ಕೇವಲ ಲೋಕಾಭಿಮುಖವಾಗಿಯೇ ಉಳಿದುಹೋದಾಗ, ನೀನು ಸೇರಬೇಕಾದ ಗುರಿ ಯಾವುದು, ನಿನ್ನ ನೆಲೆಯೇನು, ಅದಕ್ಕೆ ಬೇಕಾದ ಸಾಧನೆಯೇನು, ಎಂಬುದನ್ನು ಬೋಧಿಸಿ ಜೀವಿಗಳನ್ನು ಎಚ್ಚರಿಸಬೇಕಾಗುತ್ತದೆ. ಜೀವಿಗಳನ್ನು ಅವುಗಳ ಪಥದಲ್ಲಿ ತಂದು ನಿಲ್ಲಿಸಿ ಅವುಗಳನ್ನು ಪರತತ್ತ್ವದಲ್ಲಿ ನೆಲೆನಿಲ್ಲುವಂತೆ ಮಾಡಲಿಕ್ಕಾಗಿ ಆ ಪರತತ್ತ್ವವೇ ಮುಸುಕು ಹೊದ್ದು ಬರಬೇಕಾಗುತ್ತದೆ. ಇದನ್ನೇ 'ಅವತಾರ' ಎಂದು ಕರೆಯುತ್ತಾರೆ. ಆ ಪರತತ್ತ್ವ ತಾನು ತನ್ನದೆ ಪರಮಾನಂದ ಧಾಮದಲ್ಲಿ ನೆಲೆನಿಂತು, ಜೀವಿಗಳನ್ನು ಈ ಭವಸಾಗರದಿಂದ ದಾಟಿಸಲು (ತಾರ) ತಾನೂ ಭವಕ್ಕೆ ಇಳಿದು (ಅವ) ಜೀವಿಗಳಿಗೆ ಕರಾವಲಂಬವಿತ್ತು ತನ್ನ ಧಾಮಕ್ಕೆ ಒಯ್ಯುತ್ತದೆ. ಹೀಗೆ ಕಾಲಕಾಲದಲ್ಲಿ ಆದ ಅವತಾರಗಳಲ್ಲಿ ಗುರುದೇವ ಶ್ರೀರಾಮಕೃಷ್ಣ ಪರಮಹಂಸ ಹಾಗೂ ಶ್ರೀಮಾತೆ ಶಾರದಾದೇವಿ ಈ ದಿವ್ಯದಂಪತಿಯ ಅವತಾರವೂ ಒಂದು.

ಶ್ರೀರಾಮಕೃಷ್ಣರು ವಿವಿಧ ಆಧ್ಯಾತ್ಮಿಕ ಸಾಧನೆ, ಅನುಭವ, ಭಗವದಾಲಾಪ ಇವೇ ಮುಂತಾದ ಅಲೌಕಿಕ ಸ್ತರದಲ್ಲೇ ವಿಹರಿಸದರೆ, ಶ್ರೀಮಾತೆಯವರು ಗೃಹಿಣಿಯಾಗಿ ಸಂಸಾರದಲ್ಲಿ ಬರುವ ಅನೇಕ ವಿಧದ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಗೃಹಿಣಿಯರಲ್ಲಿ ಮೊಟ್ಟ ಮೊದಲನೆಯದಾಗಿ ಅತ್ಯಗತ್ಯವಾದುದು ಸಹನೆ, ಸೇವಾಮನೋಭಾವ. ಇದು ಕಡಮೆಯಾದರೆ ಕುಟುಂಬ ಜೀವನದಲ್ಲಿ ಅನೇಕ ಸಂಘರ್ಷಗಳು ತಲೆದೋರುತ್ತವೆ. ಇವು ಮುಂದಿನ ಪೀಳಿಗೆಯ ಮೇಲೆ ಕೆಟ್ಟ ಪ್ರಭಾವವನ್ನು ಬೀರುತ್ತವೆ. ಈ ರೀತಿಯ ಸಮಸ್ಯೆ ಸಮಾಜಕ್ಕೆ ಅತಿ ದೊಡ್ಡ ಹಾನಿಕಾರಕ ಕಳಂಕ. ಇದನ್ನು ತಡೆಗಟ್ಟುವುದು ಗೃಹಿಣಿಗೆ ಮಾತ್ರ ಸಾಧ್ಯ. ಆದುದರಿಂದ ಶ್ರೀಮಾತೆ ರೋಗಿಗಳ, ವೃದ್ಧರ, ಗುರು-ಹಿರಿಯರ ಸೇವೆಯನ್ನು ನಿಃಸ್ವಾರ್ಥ ಮನೋಭಾವದಿಂದ ಮಾಡಿ ಸಮಾಜವನ್ನು ಈ ಸಮಸ್ಯೆಯಿಂದ ಮುಕ್ತವಾಗಿಸುವ ಬಗೆಯನ್ನು ಬೋಧಿಸಿದ್ದಾರೆ.

ಮುದುಕಿಯಾದ ಭಾಮಿನಿತಾಯಿ ರೋಗ ಪೀಡಿತಳಾಗಿ ನೋಡಿಕೊಳ್ಳಲು ಯಾರೂ ದಿಕ್ಕಿಲ್ಲದೆ ತೊಳಲುತ್ತಲಿದ್ದಾಗ ಶ್ರೀಮಾತೆ ಅವರ ಅಂತ್ಯದವರೆಗೆ ಅವರ ಸೇವೆಯನ್ನು ಮಾಡಿದರು. ಬಂದ್ಯೋಪಾಧ್ಯಾಯ ಕುಟುಂಬಕ್ಕೆ ಸೇರಿದ ಒಬ್ಬ ಮಹಿಳೆ ಕಿವಿಯಲ್ಲಿ ಕುರುವಾಗಿ ಬಾಧೆ ಪಡುತ್ತಿದ್ದಳು. ಬಂಧುಗಳು ಯಾರೂ ಅವಳಿಗೆ ಸಹಾಯಕರಾಗದಿದ್ದಾಗ ಶ್ರೀಮಾತೆ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು ಮತ್ತು ಆಕೆಯ ರಕ್ಷಣೆಗೆ ಅಗತ್ಯವಾದ ಎಲ್ಲವನ್ನೂ ಆಕೆಗೆ ಒದಗಿಸಿಕೊಟ್ಟರು. ಹಿರಿಯ ವೃದ್ಧೆ ಅತ್ತೆ ಚಂದ್ರಮಣೀ ದೇವಿಯ ಸೇವೆಯನ್ನೂ ತಾಯಿ ಶ್ಯಾಮಸುಂದರೀ ದೇವಿಯ ಆರೈಕೆಯನ್ನೂ—ಅವರ ಸೇವೆಗೆ ಸದಾ ಸಿದ್ಧರಿದ್ದ ಅನೇಕ ಭಕ್ತರಿದ್ದಾಗ್ಯೂ—ತಾವೇ ಸ್ವತಃ ಮಾಡುತ್ತಿದ್ದರು.

**ಶ್ರೀಮಾತೆಯವರು ತಾವಾಗಿಯೇ ಜನರೊಡನಿದ್ದು, ಅವರ ಕೊಳೆಯನ್ನು ತೊಳೆದು, ಅವರಿಗೆ ಶಾಂತಿಯನ್ನು ನೀಡಿ ಅವರನ್ನು ಉದ್ಧರಿಸುತ್ತಿರುವರು. ಆಹಾ! ಆಕೆಯ ಕರುಣೆ ಅಪಾರ!**
—*ಸ್ವಾಮಿ ಬ್ರಹ್ಮಾನಂದ*

ಕುಟುಂಬಗಳನ್ನು ಕಾಡುವ ಅನೇಕ ಸಮಸ್ಯೆಗಳಲ್ಲಿ ಸಂತಾನ ರಾಹಿತ್ಯ ಅತ್ಯಂತ ಪ್ರಮುಖಪಾತ್ರ ವಹಿಸುತ್ತದೆ. ತಾಯಾಗದ ಹೆಂಗಸು ಯಾವ ಶುಭಕಾರ್ಯಕ್ಕೂ ಅರ್ಹಳಲ್ಲ, ಅವಳ ದರ್ಶನವೂ ಅಪಶಕುನ, ಅವಳು ಇತರರ ಮಕ್ಕಳನ್ನೂ ಎತ್ತಿ ಆಡಿಸಬಾರದು—ಇದು ರೂಢಿಯಲ್ಲಿರುವ ಸಾಮಾನ್ಯ ಜನರ ನಂಬಿಕೆ. ಜನರ ಈ ರೀತಿ ನಡೆ ತಾಯಿಯಾಗದ ಹೆಣ್ಣನ್ನು ಬಹಳವೆ ನೋಯಿಸುತ್ತದೆ. ಆ ನೋವಿನ ಆಳವನ್ನು ಬಲ್ಲವರೆ ಬಲ್ಲರು. ಶ್ರೀಮಾತೆಯವರನ್ನೂ ಜಯರಾಂಬಾಟಿಯ ಜನರು ಅನೇಕ ರೀತಿಯಲ್ಲಿ ಆಡಿಕೊಳ್ಳುತ್ತಿದ್ದರು. ಆ ಮಾತುಗಳು

ಶ್ರೀಮಾತೆಯವರ ಕಿವಿಗೂ ಬಿದ್ದು ಅವರು ಕೊರಗುತ್ತಿದ್ದರು. ಒಮ್ಮೆ ಈ ಕೊರಗಿನ ನೋವನ್ನು ಹೃದಯದೊಳಗೆ ಹೊತ್ತು ಏನೋ ಕೆಲಸದ ನಿಮಿತ್ತ ಶ್ರೀರಾಮಕೃಷ್ಣರ ಬಳಿ ಹೋದರು. ಅವರು ಈಕೆಯ ಅಂತರಂಗದ ವೇದನೆಯನ್ನು ಅರ್ಥಮಾಡಿಕೊಂಡು, "ಯಾಕೆ ಸುಮ್ಮನೇ ಯೋಚನೆ ಮಾಡುತ್ತೀ, ನಾನು ನಿನಗೆ ರತ್ನದಂತಹ ಮಕ್ಕಳನ್ನು ಬಿಟ್ಟು ಹೋಗುತ್ತೇನೆ, ಕಠಿಣ ತಪಸ್ಸಿನಿಂದಲೂ ಅಂತಹ ಮಕ್ಕಳನ್ನು ಪಡೆಯಲಾಗುವುದಿಲ್ಲ" ಎಂದು ಸಮಾಧಾನ ಮಾಡಿದರು. ಶ್ರೀರಾಮಕೃಷ್ಣರ ನಿರ್ಗಮನದ ನಂತರವೂ ಲೋಕದ ನಿಂದಾಪವಾದಗಳಿಂದ ನೊಂದ ಶ್ರೀಮಾತೆ ಒಮ್ಮೆ "ಮಕ್ಕಳಿಲ್ಲ ಮರಿಯಿಲ್ಲ, ಮಾಡುವುದಾದರೂ ಏನು?" ಎಂದು ಚಿಂತಾಮಗ್ನರಾಗಿದ್ದಾಗ ಶ್ರೀರಾಮಕೃಷ್ಣರು ಕಾಣಿಸಿಕೊಂಡು, "ನೀನು ಕೇಳುತ್ತಿರುವುದು ಒಂದು ಮಗುವನ್ನು, ನಾನು ನಿನಗೆ ರತ್ನದಂತಹ ಇಷ್ಟೊಂದು ಮಕ್ಕಳನ್ನು ಬಿಟ್ಟುಹೋಗಿದ್ದೇನಲ್ಲಾ" ಎಂದು ಉತ್ತರಿಸಿದರು. ಅನಂತರ ಶ್ರೀಮಾತೆ ಇನ್ನೆಂದೂ ಇದಕ್ಕಾಗಿ ಚಿಂತಿಸಲಿಲ್ಲ. ತನ್ನ ಬಳಿಬಂದ ಎಲ್ಲರನ್ನೂ ತನ್ನದೇ ಸಂತಾನವೆಂದು ಭಾವಿಸಿ ಪ್ರೀತಿಯಿಂದ ಪೋಷಿಸಿ ಅವರ ಸಂಪೂರ್ಣ ಜವಾಬ್ದಾರಿಯನ್ನು ಅವರೇ ಹೊತ್ತರು. ಅಂತೆಯೇ ಆ ಮಕ್ಕಳೂ ಸ್ವಂತ ಮಕ್ಕಳೂ ಮಾಡದಷ್ಟು ಶ್ರದ್ಧೆ ಪ್ರೀತಿಗಳಿಂದ ಶ್ರೀಮಾತೆಯ ಸೇವೆ ಮಾಡಿದರು.

ಕುಟುಂಬದ ಸದಸ್ಯರು, ಬಂಧುಬಾಂಧವರಿಂದ ಒದಗುವ ಸಮಸ್ಯೆಗಳು ನಾನಾ ವಿಧವಾಗಿರುತ್ತವೆ. ಶ್ರೀಮಾತೆಯವರ ಕುಟುಂಬದ ಜನರೂ ನಾನಾಬಗೆಯ ವಿಷಮ ಪರಿಸ್ಥಿತಿಗಳಿಗೆ ಅವರನ್ನು ಒಡ್ಡುತ್ತಿದ್ದರು. ಅವರ ಎಲ್ಲಾ ಸದುದ್ದೇಶಗಳನ್ನೂ ತಲೆಕೆಳಗು ಮಾಡಿಬಿಡುತ್ತಿದ್ದರು. ಅವರ ಸ್ವಂತ ಸೋದರರ ಸ್ವಾರ್ಥಪರತೆ, ನಳಿನಿಯ ಮಡಿಯ ಗೀಳು, ರಾಧಿಯ ಅಪಕ್ವ ವಕ್ರಬುದ್ಧಿ, ಸುರಬಾಲೆಯ ಹುಚ್ಚು—ಹೀಗೆ ಶ್ರೀಮಾತೆಯವರನ್ನು ನಾನಾ ವಿಧವಾಗಿ ಕಾಡುವ ಬಂಧುವರ್ಗವಿದ್ದರೂ—ಶ್ರೀಮಾತೆ ಅವುಗಳಿಂದ ನಲುಗದೆ ತಮ್ಮ ಅನಂತ ಸಹನೆ ಮತ್ತು ಪ್ರೇಮದ ಬಲದಿಂದ ಸಾಮರಸ್ಯದ, ಆನಂದಮಯದ ವಾತಾ ವರಣ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿದ್ದರು.

ಹಣದಾಸೆಗಾಗಿ ಅವರನ್ನು ಆಶ್ರಯಿಸಿದ್ದ, ಅದಕ್ಕಾಗಿ ಅವರನ್ನು ಆಗಾಗ ಪೀಡಿಸುತ್ತಿದ್ದ ಅವರ ಸಹೋದರರಾದ ಕಾಳೀಕುಮಾರ, ವರದಾಪ್ರಸಾದರಿಂದ ಶ್ರೀಮಾತೆ ಅನೇಕ ಸಂಕಷ್ಟಗಳಿಗೆ ಒಳಗಾಗಬೇಕಾಗುತ್ತಿತ್ತು. ಕಾಳೀಕುಮಾರ ದುಬಾರಿಯ ಮನುಷ್ಯ. ಹಿರಿತನ, ಸಿರಿತನ, ತೋರ್ಪಡಿಕೆ, ಒಣಪ್ರತಿಷ್ಠೆಯನ್ನೇ ಮೆರೆಯಬೇಕೆಂಬ ಚಪಲವುಳ್ಳ ವ್ಯಕ್ತಿ. ಆತನನ್ನು ಎದುರು ಹಾಕಿಕೊಂಡರೆ ಶ್ರೀಮಾತೆಗೆ ಬೈಗುಳ, ಉಪವಾಸ ಇತ್ಯಾದಿ ಬೇರೆ ರೀತಿಯ ಹಿಂಸೆ. ಅದಕ್ಕಾಗಿ ಶ್ರೀಮಾತೆ ಜಾಣತನದಿಂದ ಅವನಿಗೂ ಪ್ರತಿಯೊಂದು ಸ್ಥಳದಲ್ಲೂ ಸ್ಥಾನಮಾನ ಕಲ್ಪಿಸಿ ಅವನಿಗೆ ಕೆಲವು ಜವಾಬ್ದಾರಿಗಳನ್ನು ಹೊರಿಸಿ ವ್ಯವಸ್ಥೆ ಸುಸೂತ್ರವಾಗಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳುತ್ತಿದ್ದರು. ಅಣ್ಣ ತಮ್ಮಂದಿರಲ್ಲಿ ಆಸ್ತಿವಿಷಯವಾಗಿ ಆಗಾಗ ಜಗಳವುಂಟಾಗುತ್ತಿತ್ತು. ಕಾಳೀಕುಮಾರ ಬೇಲಿ ಒತ್ತರಿಸಿ ಹಾಕಿದ ವಿಷಯದಲ್ಲಿ ಕಲಹವುಂಟಾಗಿ ಕೈಕೈಮಿಲಾಯಿಸಿ ಅಣ್ಣ ತಮ್ಮಂದಿರು ಹೊಡೆದಾಟಕ್ಕೆ ಇಳಿದರು. ಅವರ ಜಗಳವನ್ನು ಬಿಡಿಸಲು ಶ್ರೀಮಾತೆ ಅನೇಕ ರೀತಿ ಪ್ರಯತ್ನಿಸಿದರು. ಒಂದು ಸ್ವಲ್ಪ ಕಾಲ ಜಗಳ ನಿಲ್ಲಿಸುತ್ತಿದ್ದ ಅವರು ಮತ್ತೆ ಜಗಳ ಮುಂದುವರಿಸುತ್ತಿದ್ದರು. ಆಗ ಶ್ರೀಮಾತೆ ಸಾಕ್ಷಿಯ ನೆಲೆಯಲ್ಲಿ ನಿಂತು ಮಹಾಮಾಯೆಯ ಮೋಹಜಾಲದ ಲೀಲೆಯನ್ನು ಶಾಂತ ಚಿತ್ತರಾಗಿ ನಗುತ್ತಾ ನೋಡುತ್ತಿದ್ದರು. ಶ್ರೀರಾಮಕೃಷ್ಣರ —"ಆಸ್ತಿಗಾಗಿ ಹೊಡೆದಾಡುವ ಜನರನ್ನು ನೋಡಿ ಭಗವಂತ ನಗುತ್ತಾನೆ" ಎಂಬ ಮಾತುಗಳನ್ನು ನೆನಪಿಸಿಕೊಂಡು ನಗುತ್ತಿದ್ದರು. ಹೀಗೆ ಕುಟುಂಬವನ್ನು ಒಡೆಯುವ ಅಸಂಖ್ಯ ಸನ್ನಿವೇಶಗಳ ನಡುವೆಯೇ ಬಾಳುತ್ತ ಕುಟುಂಬದ ಸ್ಥಿರತೆಯನ್ನು ಕಾಪಾಡಿದರು.

> ಏನನ್ನಾದರೂ ಒಡೆಯುವುದನ್ನು ಯಾರು ಬೇಕಾದರೂ ಮಾಡಬಲ್ಲರು, ಆದರೆ ಎಷ್ಟು ಜನರು ಅದನ್ನು ಕಟ್ಟಬಲ್ಲರು?
>
> *—ಶ್ರೀಶಾರದಾದೇವಿ.*

ಸೋದರ ಅಭಯಚರಣ ಮರಣಕಾಲದಲ್ಲಿ ಬೇಡಿಕೊಂಡಿದ್ದುದರಿಂದ ಅವನ ಪತ್ನಿ ಸುರಬಾಲೆಯ ಜವಾಬ್ದಾರಿಯನ್ನು ಶ್ರೀಮಾತೆ ಹೊರಬೇಕಾಯಿತು. ಪತಿಯ ಮರಣದಿಂದಾದ ಆಘಾತದಿಂದ ಆಕೆಗೆ ಹುಚ್ಚು ಹಿಡಿಯಿತು. ಆಕೆಯಿಂದ ಶ್ರೀಮಾತೆ ಅನುಭವಿಸಿದ ಕಷ್ಟ ಅವರ್ಣನೀಯ. ಕೋಪದ ಭರದಲ್ಲಿ ಉರಿಯುತ್ತಿರುವ ಕೊಳ್ಳಿಯಿಂದಲೇ ಶ್ರೀಮಾತೆಯನ್ನು ಹೊಡೆಯಲು ಹೋಗುವಷ್ಟು ವಿಕೋಪ ಪರಿಸ್ಥಿತಿಯನ್ನು ಆಕೆ ಉಂಟುಮಾಡುತ್ತಿದ್ದಳು. ಒಮ್ಮೆ ಆಕೆ ತನ್ನ ತಂದೆಯ ಮನೆಗೆ ಹೋಗಿದ್ದಾಗ ಅವಳ ಆಭರಣದ ಪೆಟ್ಟಿಗೆಯನ್ನು ಆ ತಂದೆಯೇ ಅಪಹರಿಸುತ್ತಾನೆ. ಆದರೆ ಆಕೆ ಆ ಅಪರಾಧವನ್ನು ಶ್ರೀಮಾತೆಯವರ ಮೇಲೇ ಹೊರಿಸಿದುದಲ್ಲದೆ ಆಕೆಯನ್ನು ಶಿಕ್ಷಿಸಲೂ ಮುಂದಾಗುತ್ತಾಳೆ. ಶ್ರೀಮಾತೆಯವರು ಸ್ವಾಮಿ ಶಾರದಾನಂದ ಹಾಗೂ ಮೋಹನಚರಣರ ಸಹಕಾರದಿಂದ, ಆ ಹುಚ್ಚಿಯ ತಂದೆಯ ಮನವೊಲಿಸಿ ಆತನು ತಪ್ಪೊಪ್ಪಿಕೊಂಡು ಆಭರಣದ ಪೆಟ್ಟಿಗೆಯನ್ನು ಹಿಂತಿರುಗಿಸುವಂತೆ ಮಾಡುತ್ತಾರೆ.

ಹುಚ್ಚಿ ಸುರಬಾಲೆಯ ಮಗಳು ರಾಧಿಯಿಂದ ಶ್ರೀಮಾತೆ ಅನುಭವಿಸಿದ ಹಿಂಸೆ ಯಾರೂ ಕಲ್ಪಿಸಿಕೊಳ್ಳಲೂ ಆಗದ್ದು. ಇತರರ ಎದುರಿನಲ್ಲಿ ಶ್ರೀಮಾತೆಯವರನ್ನು ತಿರಸ್ಕಾರದಿಂದ ನಿಂದಿಸಿ ಹೀನಾಯವಾಗಿ ಮಾತನಾಡುವುದು, ಅಣಕಿಸುವುದು, ಶಪಿಸುವುದು, ಕೈಗೆ ಸಿಕ್ಕ ಪದಾರ್ಥವನ್ನು ಅವರ ಮೇಲೆತ್ತಿ ಎಸೆಯುವುದು—ಹೀಗೆ ಶ್ರೀಮಾತೆಯವರಿಗೆ ರಾಧಿಯ ಕಾಟ ಎಣೆಯಿಲ್ಲದ್ದು.

ಜಾತಿ ಮಡಿ ಮೈಲಿಗೆಗಳಿಗೇ ವಿಪರೀತ ಪ್ರಾಧಾನ್ಯವಿತ್ತು

ಎಲ್ಲರನ್ನೂ ಸಂಕಷ್ಟಕ್ಕೆ ಒಳಗು ಮಾಡುತ್ತಿದ್ದ ನಳಿನಿಯಿಂದ ಶ್ರೀಮಾತೆ ಅನುಭವಿಸಿದ ಸಮಸ್ಯೆ ವಿಭಿನ್ನವಾದುದು. ಹೊಲೆಯರು ಬುಟ್ಟಿಗಳನ್ನು ಹೆಣೆದು ತಂದಿದ್ದರು. ಶ್ರೀಮಾತೆ ಅವರನ್ನು ಒಳಗೆ ಬರಹೇಳಿ ಅಲ್ಲಿ ಮೂಲೆಯಲ್ಲಿ ಇರಿಸಲು ಹೇಳಿದರು. ಅವರು ಒಳಗೆ ಬಂದುದನ್ನು ನೋಡಿ ನಳಿನಿಯು ಕಿರುಚಾಡಿ ಆ ಬುಟ್ಟಿಗಳನ್ನು ಎಸೆದು, "ಅವರು ಬರಹೇಳಿದರೇನಂತೆ, ಹೊಲೆಯರಾಗಿ ನೀವು ಒಳಗೆ ಬಂದಿರಲ್ಲಾ, ನಿಮಗೆಷ್ಟು ಧೈರ್ಯ" ಎಂದು ಕೋಪದಿಂದ ಅವರನ್ನು ಶಪಿಸಿದಳು. ಶ್ರೀಮಾತೆ ಅವರಿಗೆ ಸಮಾಧಾನ ಮಾಡಿ, ಒಳಗೆ ಬಂದಿದ್ದರಿಂದ ಯಾವ ಪಾಪವೂ ಬರುವುದಿಲ್ಲವೆಂದು ಧೈರ್ಯಹೇಳಿ, ಊಟಮಾಡಿಸಿ ಕಳುಹಿಸಿಕೊಟ್ಟರು. ಅವೇಳೆಯಲ್ಲಿ ಸ್ನಾನಮಾಡಿ ಬಂದ ನಳಿನಿಯನ್ನು ಶ್ರೀಮಾತೆ ಕಾರಣ ಕೇಳಿದರು. ಕಾಗೆ ಮೈಮೇಲೆ ಮೂತ್ರ ಮಾಡಿತು, ಆದಕಾರಣ ತಾನು ಮತ್ತೊಮ್ಮೆ ಸ್ನಾನ ಮಾಡಬೇಕಾಯಿತೆಂದು ನಳಿನಿ ಶ್ರೀಮಾತೆಗೆ ತಿಳಿಸಿದಳು. ಶ್ರೀಮಾತೆಯವರೆಂದರು : "ಇದೆಂಥ ವಿಚಿತ್ರ! ನನಗೆ ಇಷ್ಟೊಂದು ವಯಸ್ಸಾಯಿತು, ಕಾಗೆ ಮೂತ್ರ ಮಾಡಿದ ವಿಚಾರವನ್ನು ನಾನೆಲ್ಲೂ ಕೇಳಲಿಲ್ಲಮ್ಮ. ಜನ್ಮಜನ್ಮಾಂತರಗಳಲ್ಲಿ ಮಹಾಪಾಪ ಮಾಡದೆ ಇದ್ದರೆ ಮನಸ್ಸು ಹೀಗೆಲ್ಲ ಅಶುದ್ಧವಾಗುತ್ತದೆಯೆ? ಈ ಮಡಿಯ ಗೀಳು ಇದ್ದರೆ ಎಷ್ಟೇ ಶುದ್ಧಿ ಮಾಡಿದರೂ ಮನಸ್ಸಿಗೆ ತೃಪ್ತಿ ಇರುವುದಿಲ್ಲ. ಈ ಗೀಳು ನಾವು ಬೆಳಸಿದಷ್ಟೂ ಬೆಳೆಯುತ್ತ ಹೋಗುವುದು, ಕೊನೆಯೇ ಇರುವುದಿಲ್ಲ. ಯಾವುದೇ ವಿಷಯವಾಗಲಿ ನಾವು ಅವಕಾಶ ಕೊಟ್ಟಷ್ಟೂ ಬೆಳೆಯುತ್ತ ಹೋಗುವುದು."

ಆಗಿನ ಕಾಲದಲ್ಲಿ ವಿಧವೆಯರು ತೀವ್ರವಾದ ಕಷ್ಟಗಳನ್ನು ಎದುರಿಸಬೇಕಾಗುತ್ತಿತ್ತು, ಕಠಿಣವಾದ ವ್ರತಗಳನ್ನು ಪಾಲಿಸಬೇಕಾಗುತ್ತಿತ್ತು. ಪತಿಯ ಮರಣಾನಂತರ ಬಳೆ ಮುಂತಾದುವನ್ನು ಧರಿಸುವಂತಿರಲಿಲ್ಲ. ಶ್ರೀಮಾತೆಯವರು ಕೆಲವು ಸಲ ಬಳೆಗಳನ್ನು ತೆಗೆಯಹೋದರೂ ಶ್ರೀರಾಮಕೃಷ್ಣರು ಕಾಣಿಸಿಕೊಂಡು ಬಳೆಯನ್ನು ತೆಗೆಯುವ ಅಗತ್ಯವಿಲ್ಲವೆಂದು ತಿಳಿಸಿದರು. ಜಯರಾಂಬಾಟಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಜನರು ಈ ಕುರಿತು ಅಪವಾದಗಳನ್ನಾಡಿದರೂ ಪತಿಯು ಸದಾ ತಮ್ಮೊಡನಿರುವುದನ್ನು ಅರಿತಿದ್ದ ಅವರು ಬಳೆಯನ್ನು ತೆಗೆಯಲು ನಿರಾಕರಿಸಿದರು. ವಿಧವೆಯರು ಒಮ್ಮೆ ಊಟವಾದ ನಂತರ ಎರಡನೆಯ ಬಾರಿ ಬಾಯೆಂಜಲು ಮಾಡಿಕೊಳ್ಳುವಂತಿಲ್ಲ. ಒಮ್ಮೆ ಶ್ರೀಮಾತೆ ಊಟವಾದ ನಂತರ ಉಳಿದ ಪ್ರಸಾದವನ್ನು ಮಕ್ಕಳಿಗೆ ತೆಗೆದಿಟ್ಟಿದ್ದರು. ಆದರೆ ಒಬ್ಬ ಭಕ್ತೆ ಅದನ್ನು ತಿಂದುಬಿಟ್ಟಳು. ಶ್ರೀಮಾತೆ ಹಾಲು ಹಣ್ಣು ಸಿಹಿತಿಂಡಿ ತರಿಸಿ ಒಂದು ಚೂರು ತಿಂದು ಮಕ್ಕಳಿಗಾಗಿ ಪ್ರಸಾದ ತೆಗೆದಿರಿಸಿದರು. ಆಗ ಎರಡನೆಯ ಬಾರಿ ಬಾಯಿ ಎಂಜಲು ಮಾಡಿಕೊಂಡುದಕ್ಕೆ ಆಕ್ಷೇಪಣೆ ಮಾಡಿದವರಿಗೆ ಶ್ರೀಮಾತೆ, "ಮಕ್ಕಳ ಹಿತಕ್ಕಾಗಿ ನಾನು ಏನನ್ನೂ ಮಾಡಬಲ್ಲೆ. ಅದರಿಂದ ಯಾವ ದೋಷವೂ ಇಲ್ಲ," ಎಂದು ತಿಳಿಹೇಳಿದರು.

> **ಜನರು ಏನೇ ಹೇಳಲಿ, ನೀನು ಶ್ರೀರಾಮಕೃಷ್ಣರನ್ನು ನೆನೆಸಿಕೊಂಡು, ನಿನಗೆ ಸರಿತೋರಿದಂತೆ ಮಾಡು.**
> —*ಶ್ರೀಶಾರದಾದೇವಿ*

ನಾವು ಮಾಡುವ ಪ್ರತಿಯೊಂದು ಕ್ರಿಯೆಯೂ ಭಗವಂತನಿಗಾಗಿ, ಅವನನ್ನು ಹೊಂದಲಿಕ್ಕಾಗಿ. ಆದರೆ ಅದೇ ಮರೆತು ಕೇವಲ ಕ್ರಿಯೆ ಉಳಿಯುವುದಾದರೆ ಏನು ಪ್ರಯೋಜನ? ದೇಶಾಚಾರ ಕುಲಾಚಾರಗಳನ್ನು ಗೌರವಿಸಬೇಕು, ಅನುಸರಿಸಬೇಕು, ನಿಜ. ಆದರೆ ಹಾಗೆ ಮಾಡುವಲ್ಲಿ ನಿಷ್ಠುರತೆಯಿರಬಾರದು, ತನ್ನ ಬಗ್ಗೆ ಕ್ರೌರ್ಯವೂ ಇರಬಾರದು, ಜೀವನದ ಉದ್ದೇಶ ಮರೆಯಬಾರದು ಎಂದು ವಿವೇಕ ಹೇಳುತ್ತಿದ್ದರು.

ಜಾತಿಯ ಸಮಸ್ಯೆಯೂ ಆಗಿನ ಕಾಲದ ಕುಟುಂಬಗಳಲ್ಲಿ ವಿಪರೀತವಾಗಿತ್ತು. ಎಲ್ಲರೊಡನೆ ಮಾತಿನ ವ್ಯವಹಾರವಿದ್ದರೂ ಎಲ್ಲರೂ ಎಲ್ಲರೊಡನೆ ಊಟಮಾಡುತ್ತಿರಲಿಲ್ಲ. ತಮ್ಮ ಆಶ್ರಮದಲ್ಲಿ ಕೆಲಸ ಮಾಡಿದ ಮುಸ್ಲಿಮ್ ಬಂಧುಗಳಿಗೆ ಊಟ ಬಡಿಸಲು ಹೇಳಿದರೆ ನಳಿನಿ ದೂರದಿಂದ ಎತ್ತಿ ಎತ್ತಿ ಹಾಕುತ್ತಿದ್ದಳು. ಶ್ರೀಮಾತೆ ಅದನ್ನು ಸಹಿಸಲಾಗದೆ ತಾವೇ ಅವರಿಗೆ ಊಟಬಡಿಸಿ ಅವರ ಎಂಜಲನ್ನೂ ತೆಗೆದು ಶುಚಿಮಾಡುತ್ತಿದ್ದರು. ಭಕ್ತಿ ಮುಖ್ಯವೇ ಹೊರತು ಜಾತಿಯಲ್ಲ. ವ್ಯಕ್ತಿಯ ಹೃದಯದಲ್ಲಿನ ಪ್ರೇಮವನ್ನು ಗೌರವಿಸಿ ನಡೆಯಬೇಕೆಂದು ತಿಳಿಹೇಳಿದರು.

ಹೀಗೆ ಶ್ರೀಮಾತೆ ಕೌಟುಂಬಿಕ ಸಮಸ್ಯೆಗಳನ್ನು ವಿವೇಕ, ಸೌಜನ್ಯ, ಸೌಹಾರ್ದ, ಪ್ರೇಮ, ಅಪಾರ ಸಹನೆಗಳಿಂದ ಪರಿಹರಿಸಿಕೊಂಡು, ಜೀವಿಗಳೂ ಆ ಗುಣಗಳನ್ನು ಬೆಳೆಸಿಕೊಂಡು ನಡೆದಲ್ಲಿ ಭಗವದ್ಧರ್ಮ ನಿತ್ಯನಿರಂತರ ನೂತನವಾಗಿ ವಿರಾಜಿಸುತ್ತಿದ್ದು, ಪ್ರಪಂಚವೂ ಭಗವಂತನದೇ ಧಾಮವಾಗುವಂತೆ ಮಾಡಬಹುದೆಂದು ತೋರಿಸಿಕೊಟ್ಟರು. ಇನ್ನು ಯಾವುದೇ ರೀತಿಯಿಂದ ಪರಿಹರಿಸಲಾಗದ ಸಮಸ್ಯೆಯನ್ನು ಕೇವಲ ಸಾಕ್ಷಿಯಾಗಿ ನಿಂತು ಅದರ ಪ್ರಭಾವ ಪರಿಣಾಮಗಳಿಗೆ ಮನಕೊಡದಂತೆ ಸ್ಥಿರವಾಗಿ ದೃಢವಾಗಿ ಶಿಲೆಯಂತೆ ಅಚಲವಾಗಿದ್ದು ನೋಡಬೇಕೆಂದು ಬೋಧಿಸಿದರು. ಸೌಜನ್ಯ ಸೌಹಾರ್ದಾದಿ ಗುಣಗಳಿಂದ ಮಹಾಲಕ್ಷ್ಮಿಯಾಗಿ, ಮಿತಿಮೀರಿದ ಸಂದರ್ಭ ಒದಗಿದಾಗ, ಸಹನೆಯ ಕಟ್ಟೆಯೊಡೆದಾಗ ಸಿಡಿದೆದ್ದು ರುದ್ರರೂಪಿಣಿ ಮಹಾಕಾಳಿಯಾಗಿ, ವಿವೇಕಜ್ಞಾನಬೋಧರೂಪದಿಂದ ಮಹಾಸರಸ್ವತಿ ರೂಪಿಣಿಯಾಗಿ, ಕೊನೆಗೆ ಎಲ್ಲ ಭಾವಗಳನ್ನು ಮೀರಿದ ಗುಣಾತೀತೆಯಾಗಿ, ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರವನ್ನು ನಿರೂಪಿಸಿ ಶ್ರೀಮಾತೆ ಸಕಲಾದರ್ಶಪ್ರಾಯರಾಗಿ ಭಕ್ತಮಾನಸ ಸರೋವರದಲ್ಲಿ ಹಂಸದಂತೆ ವಿಹರಿಸುತ್ತಿದ್ದಾರೆ. ❖

> **ಶ್ರೀಮಾತೆಯವರ ಜೀವನವೈಶಿಷ್ಟ್ಯವನ್ನು ಕುರಿತು ಧ್ಯಾನಿಸುವುದಕ್ಕಿಂತ ಮಿಗಿಲಾದ ಮನಸ್ಸು ಮತ್ತು ಹೃದಯಗಳನ್ನು ಪರಿಶುದ್ಧಗೊಳಿಸುವ ಸಾಧನ ಬೇರೊಂದಿಲ್ಲ. —*ಟಿ.ಎಂ.ಪಿ. ಮಹಾದೇವನ್.***